1	2	3	4	5
7.	ಗುಮಾಸ್ತ ಗ್ರೇಡ್-1 ಟೈಪಿಸ್ಟ್	172	116	5
8.	ಗುಮಾಸ್ತ ಗ್ರೇಡ್-II	18	13	2
9.	ವಾಹನ ಚಾಲಕ: ನಾಯಕ	7	3	-
10.	ಸಿಪಾಯಿ(ಜವಾನ) ಭದ್ರತಾ ಸಿಬ್ಬಂದಿ	135	62	1
		497	**309**	**12**

ಮೊಳಕಾಲ್ಮೂರು ತಾಲ್ಲೂಕಿನ ಅಭಾವ ಸ್ಥಿತಿ

2997-- ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ತಾಲ್ಲುಕು ಬರಗಾಲ ಪೀಡಿತ ಪ್ರದೇಶವೆಂದು ಸರ್ಕಾರವು ಈಗಾಗಲೇ ಘೋಷಿಸಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಮೊಳಕಾಲ್ಮೂರು ತಾಲ್ಲೂಕು ಬರಗಾಲ ಪೀಡಿತವೆಂದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ?

ಈ) ಹಾಗಿದ್ದಲ್ಲಿ, ಈ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ, ಮುಂದಿನ ಪರಿಹಾರ ಕಾರ್ಯಕ್ರಮಗಳನ್ನು ಸರ್ಕಾರವು ಕೈಗೊಳ್ಳುವುದೇ?

ಶ್ರೀ ರಮೇಶ್. ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಇಲ್ಲ.

ಆ) ತಾಲ್ಲೂಕಿನಲ್ಲಿ ಬಿದ್ದಿರುವ ಮಳೆ ವ್ಯಾಪಕವಾಗಿಲ್ಲದಿದ್ದರೂ ವಾಡಿಕೆ ಮಳೆ 202 ಮಿ.ಮೀ.ಗೆ ವ್ಯತಿರಿಕ್ತವಾಗಿ ಇಲ್ಲಿಯವರೆಗೆ 161.00 ಮಿ.ಮೀ ಮಳೆಯಾಗಿದೆ. ಆದ್ದರಿಂದ ಮೊಳಕಾಲ್ಮೂರು ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿಲ್ಲ.

ಇ) ಮೊಳಕಾಲ್ಮೂರು ತಾಲ್ಲೂಕಿನ ರಾಂಪುರ, ನಾಗಸಮುದ್ರ, ಸಿದ್ದಾಪುರ, ಬಿ.ಬಿ. ಹಳ್ಳಿ, ದೇವಸಮುದ್ರ, ಸಂತೇಗುಡ್ಡ, ತಮ್ಮೇನಹಳ್ಳಿಗಳಲ್ಲಿ ಮಳೆಯಾಗಿರುವುದಿಲ್ಲ. ತಾಲ್ಲೂಕಿನ ಸಾಮಾನ್ಯ ಬಿತ್ತನೆ ಕ್ಷೇತ್ರ 33,380 ಹೆಕ್ಟೇರ್‌ಗೆ ವ್ಯತಿರಿಕ್ತವಾಗಿ 18,820 ಹೆಕ್ಟೇರುಗಳಲ್ಲಿ ಬಿತ್ತನೆಯಾಗಿದ್ದರೂ ಕಡಿಮೆ ಮಳೆಯಿಂದಾಗಿ 405 ಹೆಕ್ಟೇರ್ ಪ್ರದೇಶದಲ್ಲಿ ಮೊಳಕೆ ಬಾಧಿತಗೊಂಡಿದೆ.

ಈ) ಪರಿಸ್ಥಿತಿಯ ಗಂಭೀರತೆಯನ್ನರಿತು, ಈಗಾಗಲೇ ಕುಡಿಯುವ ನೀರಿನ ಹಾಗೂ ಮೇವಿನ ಅಭಾವ ಇರುವ ಕಡೆಗಳಲ್ಲಿ, ಕುಡಿಯುವ ನೀರು ಹಾಗೂ ಮೇವು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೇ ಜೈಆರ್‌ವೈ ಇಎಎಸ್, ಮತ್ತು ಸಂಸತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಜನಗಳಿಗೆ ಉದ್ಯೋಗವನ್ನು ಒದಗಿಸಲಾಗುತ್ತಿದೆ.

ಹುಬ್ಬಳ್ಳಿಯ ಭವಾನಿಶಂಕರ ದೇವಸ್ಥಾನದ ಜೀರ್ಣೋದ್ಧಾರ

2998 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ಮಹಾನಗರದ ಹಳೇ ಹುಬ್ಬಳ್ಳಿಯ ಪ್ರಾಚೀನ ಭವಾನಿಶಂಕರ ದೇವಸ್ಥಾನವು ಅತ್ಯಂತ ಸುಂದರ ಪ್ರಾಚೀನ ದೇವಾಲಯವಾಗಿದ್ದು, ಶಿಲ್ಪ ಕಲೆಯ ಅತ್ಯಮೂಲ್ಯ ಸ್ಮಾರಕವಾಗಬೇಕಾಗಿದ್ದು, ಈ ದೇವಾಲಯ ಯಾವುದೇ ಸಂರಕ್ಷಣೆ ಇಲ್ಲದೆ ಅತ್ಯಂತ ಜೀರ್ಣಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?*

ಆ) *ಬಂದಿದ್ದಲ್ಲಿ, ಈ ಭವಾನಿಶಂಕರ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಅದರ ಸಂರಕ್ಷಣೆ ಸಲುವಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಇಲ್ಲ, ಈ ದೇವಸ್ಥಾನವು ಮುಂಬೈ ಸಾರ್ವಜನಿಕ ಜಿಮ್ಮೆಗಳ ಕಾಯ್ದೆ 1950ರಡಿಯಲ್ಲಿ ನೋಂದಾಯಿಸಲಾಗಿದೆ ಸದರಿ ಸಂಸ್ಥೆಯ ಆಡಳಿತವು ವಂಶಪಾರಂಪರ್ಯ ಟ್ರಸ್ಟಿಗಳ ವಶದಲ್ಲಿದೆ. ಸಂಸ್ಥೆಯ ದುರಸ್ಥಿಗಾಗಿ ಟ್ರಸ್ಟಿಗಳಿಂದ ಸರ್ಕಾರಕ್ಕೆ ಮನವಿ ಬಂದಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಧಾರವಾಡ ಜಿಲ್ಲೆಯಲ್ಲಿರುವ ಸಹಕಾರಿ ನೂಲಿನ ಗಿರಣಿ

3000 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡ ಜಿಲ್ಲೆಯಲ್ಲಿರುವ ಸಹಾಕರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು?*

ಆ) *ಅವುಗಳಲ್ಲಿ ಲಾಭದಲ್ಲಿರುವ, ನಷ್ಟದಲ್ಲಿರುವ ಗಿರಣಿಗಳು ಎಷ್ಟು?*

ಇ) *ಯಾವ ಯಾವ ಗಿರಣಿಗಳು ಎಷ್ಟೆಷ್ಟು ನಷ್ಟ ಅನುಭವಿಸುತ್ತವೆ. ಈ ಗಿರಣಿಗಳು ನಷ್ಟ ಅನುಭವಿಸಲು ಕಾರಣಗಳೇನು, ಅದಕ್ಕೆ ಯಾರು ಜವಾಬ್ದಾರರು?*